# ಕಂಗನಾ ಮೇಲೆ ಮಯಂಕ್ ಸಿಟ್ಟು

ಮಯಂಕ್ ಮಧುರ್ ಬಿಜೆಪಿಯವರು. ನಟಿ ಕಂಗನಾ ರನೋಟ್ ಅವರಿಗೆ ರಾಜಕೀಯ ಸಲಹೆಗಳನ್ನೂ ನೀಡುತ್ತಿರುತ್ತಾರೆ. ಮೊನ್ನೆ ಅವರಿಗೆ ವಿಪರೀತ ಕೋಪ. ಮಾಧ್ಯಮವೊಂದಕ್ಕೆ ಅದಕ್ಕೆ ಕಾರಣವನ್ನೂ ಫಿಲ್ಟರ್ ಕಿತ್ತೆಸೆದು ಹೇಳಿದರು. ಕಂಗನಾ ಅವರನ್ನು ಕೋರ್ಟಿಗೆಳೆಯುವುದಾಗಿ ಮಯಂಕ್ ಅರುಹಿದಾಗ ಕೋಪಾವೇಶವಿತ್ತು. 'ತೇಜಸ್' ಸಿನಿಮಾದಲ್ಲಿ 15 ನಿಮಿಷಗಳ ಪಾತ್ರವೊಂದರ ಅವಕಾಶ ಕೊಡುವುದಾಗಿ ಮಾತಾಗಿತ್ತು. ಅದನ್ನು ಕಂಗನಾ ಮುರಿದರೆನ್ನುವುದೇ ಈ ಕೋಪದ ಮೂಲ.

ಸರ್ವೇಶ್ ಮೇವಾಡ 'ತೇಜಸ್' ಸಿನಿಮಾ ನಿರ್ದೇಶಕ. ತೇಜಸ್ ಗಿಲ್ ಎಂಬ ಪೈಲಟ್ ಬದುಕಿನ ಆಸಕ್ತಿಕರ ಹೋರಾಟ ಕಥನದ ಸಿನಿಮಾ ಅದು. ಚಿತ್ರೀಕರಣ ನಡೆಸಲು ರಕ್ಷಣಾ ಇಲಾಖೆಯಿಂದ ಕೆಲವು ಅನುಮತಿ ಬೇಕಿತ್ತು. ಆ ಪ್ರಕ್ರಿಯೆಗೆ ಮಯಂಕ್ ಮಧುರ್ ನೆರವಾದರು. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನೇ ಭೇಟಿ ಮಾಡಿಸಿದರು. ಅನುಮತಿ ದೊರೆಯುವವರೆಗೆ ತಮ್ಮನ್ನು ಮುಂದಿಕ್ಕಿಕೊಂಡು ಓಡಾಡಿದ ಕಂಗನಾ ಕ್ರಮೇಣ ತಮ್ಮನ್ನು ಉದಾಸೀನಮಾಡಲು ಪ್ರಾರಂಭಿಸಿದರೆನ್ನುವುದು ಮಯಂಕ್ ಕೋಪ ಜಮೆಯಾಗಲು ಕಾರಣ. ಸಿನಿಮಾದಲ್ಲಿ ಪಾತ್ರ ಕೊಡದೇ ಇದ್ದುದರಿಂದ ಹತಾಶರಾದ ಅವರು ತಾವು ಮಾಡಿಕೊಟ್ಟ ಕೆಲಸಕ್ಕೆ ಶುಲ್ಕವನ್ನಾದರೂ ನೀಡಬೇಕು ಎಂಬ ಬೇಡಿಕೆ ಮುಂದಿಟ್ಟರು. ಯಾವಾಗ ಚಿತ್ರತಂಡದವರು ದೂರ ಇಡಲು ಆರಂಭಿಸಿದರೋ, ಕಾನೂನು ದಾರಿ ಹುಡುಕಿಕೊಂಡು ಹೋಗಲು ಮಯಂಕ್ ನಿರ್ಧರಿಸಿದರು.

ಬಿಜೆಪಿಯ ಪರವಾಗಿ ಬ್ಯಾಟಿಂಗ್ ಮಾಡುವವರು ಕಂಗನಾ. ಅಂಥ ಅವರಿಗೇ ಅದೇ ಪಕ್ಷದ ಒಬ್ಬರು ಈ ಪರಿಯಲ್ಲಿ ಪ್ರತಿಕ್ರಿಯಿಸಿರುವುದು ಅಚ್ಚರಿ. ■






# 'ಜೈಲರ್'ನಲ್ಲಿ ತಮನ್ನಾ ಹಾಡಿನ ಬೆಳ್ಳಿಮಿಂಚು

ಗುಂಗುರು ಕೂದಲು. ಆಗಾಗ ಬದಲಾಗುವ ಚೆಂದದ ಬಟ್ಟೆ. ನೋಡುಗರ ಹೊಟ್ಟೆಯಲ್ಲಿ ಚಿಟ್ಟೆ... ತಮನ್ನಾ ಭಾಟಿಯಾ 'ಕಾವಾಲಯ್ಯ' ಹಾಡು ಹೀಗೆ ಕಣ್ಣು ಕೋರೈಸುತ್ತಿದೆ. 'ಜೈಲರ್' ತಮಿಳು ಸಿನಿಮಾ ಆಗಸ್ಟ್ 10ಕ್ಕೆ ತೆರೆಕಾಣುತ್ತಿದೆ. ನಿರ್ದೇಶಕ ನೆಲ್ಸನ್ ಅದರ ಪ್ರಚಾರದ ಭಾಗವಾಗಿಯೇ ಈ ಹಾಡನ್ನೀಗ ತೇಲಿಬಿಟ್ಟದ್ದಾರೆ. ದೊಡ್ಡ ಸೆಟ್‌ನಲ್ಲಿ ತಮನ್ನಾ ಹೆಜ್ಜೆ ಹಾಕುತ್ತಿದ್ದರೆ, ಪಕ್ಕದಲ್ಲಿ ರಜನೀಕಾಂತ್ ಸ್ಟೈಲಿಷ್ ಆಗಿ ಕನ್ನಡಕ ಹಾಕಿಕೊಂಡು ಮೆಲ್ಲಗೆ ಹೆಜ್ಜೆ ಹಾಕುತ್ತಾ ನಿಲ್ಲುತ್ತಾರೆ.

ಮೋಹನ್‌ಲಾಲ್, ಜಾಕಿ ಶ್ರಾಫ್, ಶಿವರಾಜ್‌ಕುಮಾರ್, ರಮ್ಯಾ ಕೃಷ್ಣ, ವಿನಾಯಕನ್, ಮಿರ್ನಾ ಮೆನನ್ – ಹೀಗೆ ದೊಡ್ಡ ತಾರಾಬಳಗವೇ ಈ ಸಿನಿಮಾದಲ್ಲಿದೆ. ರಜನೀಕಾಂತ್ ಸೂಪರ್‌ಸ್ಟಾರ್‌ಗಿರಿಯ ಪ್ರಭಾವಳಿಯ ಜತೆಗೆ ದೇಶದ ವಿವಿಧೆಡೆಯ ಪ್ರತಿನಿಧಿಗಳಂತೆ ನಟ–ನಟಿಯರು ಅಭಿನಯಿಸಿರುವುದರಿಂದ ಸಿನಿಮಾ ಹೇಗಿದ್ದೀತೆಂಬ ಕುತೂಹಲ ಮಡುಗಟ್ಟಿದೆ.

'ಡಾಕ್ಟರ್' ತಮಿಳು ಸಿನಿಮಾ ಮೂಲಕ ಹಿಟ್ ಕೊಟ್ಟಿದ್ದ ನೆಲ್ಸನ್, 'ಬೀಸ್ಟ್' ಸಿನಿಮಾದಲ್ಲಿ ಸೋಲುಂಡಿದ್ದರು. ತಲಪತಿ ವಿಜಯ್ ಅಭಿನಯದ ಆ ಸಿನಿಮಾ ನಿರೀಕ್ಷಿತ ಯಶಸ್ಸನ್ನು ಕಂಡಿರಲಿಲ್ಲ. ಈಗ ರಜನೀಕಾಂತ್ ಕೂಡ ಒಂದು ಯಶಸ್ಸಿಗಾಗಿ ಹಂಬಲಿಸುತ್ತಿದ್ದಾರೆ. ಅವರ ಹಿಂದಿನ 'ಪೆಟ್ಟಾ', 'ದರ್ಬಾರ್' ಸಿನಿಮಾಗಳು ಪ್ರಯೋಗದ ದೃಷ್ಟಿಯಿಂದ ಗಮನ ಸೆಳೆದಿದ್ದವಾದರೂ, ಬಾಕ್ಸ್‌ಆಫೀಸ್ ಗಳಿಕೆಗೆ ಅನುಕೂಲವಾಗಿರಲಿಲ್ಲ. ಸುಮಾರು ₹200 ಕೋಟಿ ವೆಚ್ಚದಲ್ಲಿ 'ಜೈಲರ್' ತಯಾರಾಗಿದೆ. ಅನಿರುದ್ಧ್ ರವಿಚಂದರ್ ಹಾಡುಗಳಿಗೆ ಸ್ವರ ಸಂಯೋಜನೆ ಮಾಡಿದ್ದಾರೆ.

ತಮನ್ನಾ ಭಾಟಿಯಾ ವೃತ್ತಿಬದುಕಿಗೂ 'ಕಾವಾಲಾ' ಹಾಡು ಇಂಧನವಾಗಿ ಒದಗಿಬಂದಿದೆ. ಟ್ವಿಟರ್‌ನಲ್ಲಿ ಅವರ ಅಭಿಮಾನಿಗಳು 'ಭಾರತದ ಶಕೀರಾ' ಎಂದು ಹೊಗಳಿದ್ದು, ಅದಕ್ಕೆ ಖುದ್ದು ತಮನ್ನಾ ಸಂತಸದ ಪ್ರತಿಕ್ರಿಯೆ ತುಳುಕಿಸಿದ್ದಾರೆ. ಕೆಲವರು ತಮನ್ನಾ ನೃತ್ಯ ಲಾಲಿತ್ಯವನ್ನು ಕೊಂಡಾಡಿದರೆ, ಮತ್ತೆ ಕೆಲವರದ್ದು ವಯಸ್ಸಾಗದವರಲ್ಲಿ ಇವರೂ ಒಬ್ಬರೆಂಬ ಅಭಿಮಾನದ ಪರಾಕಾಷ್ಠೆಯ ಪ್ರತಿಕ್ರಿಯೆ.

ಕಳೆದ ವರ್ಷದ ಆರಂಭದಿಂದಲೇ ನೆಲ್ಸನ್ 'ಜೈಲರ್' ಸಿನಿಮಾ ಕೆಲಸಗಳನ್ನು ಪ್ರಾರಂಭಿಸಿದ್ದರು. ಈ ವರ್ಷ ಜೂನ್‌ನಲ್ಲಿ ಚಿತ್ರ ಬಿಡುಗಡೆ ಮಾಡುವ ಮಟ್ಟಕ್ಕೆ ಬಂದು ನಿಂತಿದೆ. ಬೇರೆ ಬೇರೆ ಭಾಗಗಳಲ್ಲಿ ವಿತರಣೆಯ ಹಕ್ಕು ಪಡೆಯುವ ಯತ್ನಗಳು ಈಗಾಗಲೇ ಪ್ರಾರಂಭವಾಗಿರುವುದರಿಂದ ನಿರ್ಮಾಣ ಮಾಡಿರುವ ಸನ್ಸ್ ಪಿಕ್ಚರ್ಸ್ ಕೂಡ ಈಗ ನಿರಾಳ. ■